ನೆಲವಾಗಲ್ ಗ್ರಾಮವನ್ನು ಸ್ಥಳಾಂತರಿಸುವ ಬಗ್ಗೆ

೧೧೧೧ ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು). —ಮಾನ್ಯ ಕಂದಾಯ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ರಾಣೆಬೆನ್ನೂರು ತಾಲ್ಲೂಕು ನೆಲವಾಗಿಲು ಗ್ರಾಮವನ್ನು ಸ್ಥಳಾಂತರಿಸುವ ಬಗ್ಗೆ ಪ್ರಸ್ತಾವನೆ ಇದೆಯೇ,

ಆ) ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ,

ಇ) ಸದರಿ ಹಳ್ಳಿಯನ್ನು ಇನ್ನು ಮೂರು ತಿಂಗಳಲ್ಲಿ ಸ್ಥಳಾಂತರಿಸಲು ಸಾಧ್ಯವೇ ?

ಶ್ರೀ ಕೆ. ಹೆಚ್ ಪಾಟೀಲ್ (ಕಂದಾಯ ಹಾಗೂ ಕಾರ್ಮಿಕ ಮಂತ್ರಿಗಳು).—

ಅ) ಹೌದು.

ಆ) ಕೋಡಿಯಾಳ ಗ್ರಾಮದ ಸ.ನಂ.೧೧೦ರಿಂದ ೨೩ರವರೆಗೆ ನೆಲವಾಗಿಲಂ ಗ್ರಾಮವನ್ನು ಸ್ಥಳಾಂತರಿಸಲು ಭೂ ಸ್ವಾಧೀನಪಡಿಸಿಕೊಂಡಿದೆ. ಈ ಬಗ್ಗೆ ದಾವಣಗೆರೆ ನಗರ ಯೋಜನಾ ಪ್ರಾಧಿಕಾರವು ನೀಲಿ ನಕ್ಷೆ ತಯಾರಿಸಿ ಸಲ್ಲಿಸುವಹಂತದಲ್ಲಿದೆ.

ಇ) ನೀಲಿ ನಕ್ಷೆ ತಯಾರಾದ ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿ ಭೂ ಸುಧಾರಣಾ ನಿಯಮಾನುಸಾರ ಸರ್ಕಾರದಿಂದ ಹೆಚ್ಚುವರಿ ಜಮೀನಿನ ಘೋಷಣೆ

೧೧೩೪. ಶ್ರೀ ಮಂಜುನಾಥ ಸಿ, ಕುನ್ನೂರು (ಶಿಗ್ಗಾಂವ)—ಮಾನ್ಯ ಕಂದಾಯ ಹಾಗೂ ಕಾರ್ಮಿಕರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಭೂ ಸುಧಾರಣೆ ಕಾನೂನಿನ ಅನ್ವಯ ಭೂಮಿತಿಯ ಫಾರಂ ನಂ. ೧೧ರ ಪ್ರಕಾರ ಎಷ್ಟು ಎಕರೆ ಜಮೀನಂ ಹೆಚ್ಚುವರಿ ಅಂತ ಸರ್ಕಾರದವರು ಘೋಷಣೆ ಮಾಡಲಾಗಿದೆ,

ಆ) ಹಾಗಿದ್ದಲ್ಲಿ, ಸದರಿ ಜಮೀನುಗಳ ಪೈಕಿ ಎಷ್ಟು ಎಕರೆ ಜಮೀನುಗಳನ್ನು ಭೂ ರಹಿತ ಕೃಷಿ ಕಾರ್ಮಿಕರಿಗೆ ಹಂಡಲಾಗಿದೆ,

ಇ) ಒಂದು ವೇಳೆ ಭೂ ಮಾಲೀಕರು ಭೂ ನ್ಯಾಯ ಮಂಡಲಿಗಳ ತೀರ್ಪಿನ ವಿರುದ್ಧ ಶ್ರೇಷ್ಠ ನ್ಯಾಯಾಲಯಕ್ಕೆ ಅಪೀಲು ಮಾಡಿಕೊಂಡಿದ್ದಲ್ಲಿ ಎಷ್ಟು ಮೊಕದ್ದಮೆಗಳು ಬಾಕಿ ಇವೆ ? ಮತ್ತು ಎಷ್ಟು ವರ್ಷಗಳಿಂದ ಬಾಕಿ ಇವೆ,

ಈ) ಸದರಿ ಮೊಕದ್ದಮೆಗಳನ್ನು ಕೂಡಲೇ ಮುಗಿಸಲು ಸರ್ಕಾರದವರು ಯಾವ ಕ್ರಮಗಳನ್ನು ಕೈಗೊಂಡಿದ್ದಾರೆ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಹಾಗೂ ಕಾರ್ಮಿಕ ಸಚಿವರು)—

ಅ) ೨,೨೫,೦೩೧ ಎಕರೆ.

ಆ) ೧,೧೪,೮೮೪ ಎಕರೆ

ಇ) ೪೫೭೫ ಪ್ರಕರಣಗಳಲ್ಲಿ ಭೂ ನ್ಯಾಯ ಮಂಡಳಿಗಳ ಆದೇಶಗಳ ವಿರುದ್ಧ ಭೂ ಪ್ರಾಲೀಕ ಶ್ರೇಷ್ಠ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಿದ್ದಾರೆ. ಅವುಗಳಲ್ಲಿ ೨೫೫೧ ಪ್ರಕರಣಗಳು ತೀರ್ಮಾನವಾಗಿ ೨೦೨೪ ಪ್ರಕರಣಗಳು ೧೯೮೨ ಮತ್ತು ನಂತರದಿಂದ ಬಾಕಿ ಇವೆ.

ಈ) ಸದರಿ ಮೊಕದ್ದಮೆಗಳನ್ನು ಬೇಗನೆ ತೀರ್ಮಾನಿಸುವಂತೆ ಶ್ರೇಷ್ಠ ನ್ಯಾಯಾಲಯಕ್ಕೆ ಮನವಿ ಮಾಡಿಕೊಳ್ಳುವಂತೆ ಸರ್ಕಾರೀ ವಕೀಲರಿಗೆ ಸೂಚನೆ ಕೊಡಲಾಗುವುದು.